ಓಎಸ್ 367/2016

ಡಿ ಡಬ್ಲ್ಯೂ: 01.

ದಿನಾಂಕಃ 23.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾ ವಾದಿ ಪರ ಶ್ರೀ ಎಸ್ ಎನ್ ಎಲ್ ವಕೀಲರಿಂದಃ**

ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಪಂಚಾಯತಿಯಲ್ಲಿ ವಾಟರ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದೇನೆ. ಈ ಬಗ್ಗೆ ನಾನು ನನ್ನ ಪ್ರಮಾಣಪತ್ರದಲ್ಲಿ ನಮೂದು ಮಾಡಿಸಿರುವುದಿಲ್ಲ. ನಾನು ನನ್ನ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿದ್ದೆ, ಈಗ ಮರೆತುಹೋಗಿದೆ. ಪ್ರಮಾಣಪತ್ರ ಬರೆಯಲು ಮಾಹಿತಿಯನ್ನು ನನ್ನ ಗ್ರಾಮಸ್ಥರು ನೀಡಿರುತ್ತಾರೆ. ನಮ್ಮ ಗ್ರಾಮಸ್ಥರು ಏನನ್ನು ಹೇಳಿ ಬರೆಸಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಒಂದೇ ಊರಿನವರು, ಸಂಬಂಧಿಕರಾಗಬೇಕು. ನನ್ನ ಮನೆ ಹಾಗೂ ವಾದಿಯ ಮನೆ ನಡುವೆ ಸುಮಾರು 50 ಮೀಟರ್ ಅಂತದಲ್ಲಿದೆ. ದಾವಾ ಸ್ವತ್ತಿನ ಸುತ್ತಮುತ್ತ ಮನೆಗಳು ಇವೆ ಎಂದರೆ ಸರಿ. ವಾದಿಗೆ ಉದ್ದೇಶಪೂರ್ವಕವಾಗಿ ನಾನೊಬ್ಬನೇ ತೊಂದರೆ ನೀಡುತ್ತಿದ್ದೇನೆ ಎಂದರೆ ಸಾಕ್ಷಿ ಎಲ್ಲರೂ ಇದ್ದೇವೆ ಎಂದು ಉತ್ತರಿಸುತ್ತಾರೆ. ನಮ್ಮ ಊರಿನಲ್ಲಿ ಸುಮಾರು 300 ಮನೆಗಳಿವೆ. ಸುಮಾರು 1000 ಜನರಿದ್ದಾರೆ.

ವಾದಿಗೆ ದಾವಾ ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ದಾವಾಸ್ತಿ ವಾದಿಗೆ ಸೇರಿರುವುದಲ್ಲ, ಪಂಚಾಯತಿಗೆ ಸೇರಬೇಕೆಂದು ಉತ್ತರಿಸುತ್ತಾರೆ. ವಾದಿಯ ತಂದೆಯ ಹೆಸರು ಕಪನಯ್ಯ. ದಾವಾಸ್ತಿ 1962 ರಲ್ಲಿ ವಾದಿಯ ತಂದೆಗೆ ಬಂದಂತಹ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ಪ್ರತಿವಾದಿಗಳು ವಾದಿಯ ಸ್ವಾದೀನಕ್ಕೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ತಿ ಹಾಲಿ ವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನಲ್ಲಿ ದನಕರುಗಳನ್ನು ಕಟ್ಟಿರುತ್ತಾರೆ ಹಾಗೂ ಅವರೇ ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಜಂಜರ್ ನಂಬರ್ ಅಥವಾ ಪ್ರಾಪರ್ಟಿ ನಂಬರ್ ತಿಳಿದಿಲ್ಲ. ದಾವಾಸ್ತಿಯ ಚೆಕ್ಕುಬಂಧಿ ದಕ್ಷಿಣಕ್ಕೆ ರಸ್ತೆ, ಪಶ್ಚಿಮಕ್ಕೆ ಸಣ್ಣಜವರಮ್ಮರವರ ಮನೆ, ಪೂರ್ವಕ್ಕೆ ರಸ್ತೆ, ಉತ್ತರಕ್ಕೆ ಕೆಂಪರಾಜುರವರ ಮನೆ. ದಾವಾಸ್ವತ್ತಿನ ವಿಸ್ತೀರ್ಣ 30*40 ಇರುತ್ತದೆ. ದಾವಾಸ್ವತ್ತಿನಲ್ಲಿ ಗ್ರಾಮಪಂಚಾಯತಿಯಿಂದ ನಲ್ಲಿಯನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗಕ್ಕೆ ವಾದಿ

ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿ ಕಟ್ಟಲೇ ಬೇಕು ಎಂದು ಉತ್ತರಿಸುತ್ತಾರೆ. ಇತರೆ ಗ್ರಾಮಸ್ಥರು ವಾದಿಯ ಸ್ವಾಧೀನಕ್ಕೆ ತೊಂದರೆ ನೀಡುತ್ತಿಲ್ಲ, ನಾನು ಮತ್ತು ಪ್ರತಿವಾದಿಗಳು ಯಾವುದಕ್ಕಾಗಿ ತೊಂದರೆ ನೀಡುತ್ತಿದ್ದೀರಿ ಎಂದರೆ ಸಾಕ್ಷಿ ದಾವಾಸ್ವತ್ತು ನಮ್ಮ ಸಮುದಾಯಕ್ಕೆ ಸೇರಿರುವುದು ಅದಕ್ಕಾಗಿ ಪ್ರಶ್ನಿಸುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. ದಾವಾಸ್ವತ್ತು ನಮ್ಮ ಸಮುದಾಯಕ್ಕೆ ಸೇರಿರುವುದು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ವೈಯಕ್ತಿಕ ದ್ವೇಷದಿಂದ ವಾದಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತು ವಾದಿಗೆ ಸೇರಿರುವ ಪಿತ್ರಾರ್ಜಿತ ಆಸ್ತಿ ಅವರ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತು ನಮ್ಮ ಸಮುದಾಯಕ್ಕೆ ಸೇರಿರುವುದು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸದಿದ್ದರೂ ಹಾಜರುಪಡಿಸಿದ್ದೇನೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.